**ದಿನಾಂಕ: 26.03.2025 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ 6 ಮತ್ತು 7 ನೇ ಪ್ರತಿವಾದಿಪರ ಶ್ರೀ.ಎಂ.ಎಸ್.ಹೆಚ್ ವಕೀಲರಿಂದ**

ಈ ಸಾಕ್ಷಿ ನುಡಿಯಲು 3 ಮತ್ತು 4 ನೇ ಪ್ರತಿವಾದಿಯರು ಅವರ ಪರವಾಗಿ ನನಗೆ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ ನಾನು ನನ್ನ ಹಾಗೂ 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆಂದು ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ 1 ನೇ ಪ್ರತಿವಾದಿ ಈಗ 7 ರಿಂದ 8 ವರ್ಷಗಳಿಂದ ಮೃತ ಪಟ್ಟಿರುತ್ತಾರೆ. ನಾನು 1 ನೇ ಪ್ರತಿವಾದಿಯರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆಂದು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಾನು 1 ನೇ ಪ್ರತಿವಾದಿಯರ ಪರವಾಗಿಯೂ ಸಹ ಸಾಕ್ಷ್ಯ ನುಡಿಯುತ್ತಿದ್ದೇನೆಂದು ಬರೆದಿರುತ್ತೇನೆ. 1 ನೇ ಪ್ರತಿವಾದಿಯ ತಂದೆಯ ಹೆಸರು ಬಸಪ್ಪ. ದಾವಾ ಸರ್ವೆ ನಂಬರ 208 ವಿಸ್ತೀರ್ಣ 05 ಎಕರೆ 04 ಗುಂಟೆ ಮತ್ತು 216/1 ರ 03 ಎಕರೆ 24 ಗುಂಟೆ ಆಸ್ತಿ ಮೂಲತಃ 1 ನೇ ಪ್ರತಿವಾದಿಯ ತಂದೆ ಬಸಪ್ಪರವರ ಆಸ್ತಿಯಾಗಿರುತ್ತದೆ. ಈ ಎರಡು ಆಸ್ತಿಗಳು ಮೃತ 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಂತಹ ಆಸ್ತಿಗಳು ಎಂದರೆ ಸರಿಯಲ್ಲ. ಈ ಎರಡು ಆಸ್ತಿಗಳು 1 ನೇ ಪ್ರತಿವಾದಿಗೆ ಹೇಗೆ ಬಂದವು ಎಂಬುದು ನನಗೆ ಗೊತ್ತಿಲ್ಲ. ಈ ಎರಡು ಆಸ್ತಿಗಳು ಶಿವಪುತ್ರಪ್ಪ ಮತ್ತು ಅವರ ಮಕ್ಕಳುಗಳ ಏಕತ್ರ ಗರಾಣೆಯ ಆಸ್ತಿಗಳು ಎಂದರೆ ಸರಿಯಲ್ಲ 1 ನೇ ಪ್ರತಿವಾದಿ ಹಾಗೂ ಅವರ ಮಕ್ಕಳುಗಳಿಗೆ ಈ ಎರಡು ಆಸ್ತಿಗಳು ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳು ಎಂದರೆ ಸರಿಯಲ್ಲ. ಈ ಎರಡು ಆಸ್ತಿಗಳಿಂದ ಬಂದ ಆದಾಯದಿಂದ 1 ನೇ ಪ್ರತಿವಾದಿ ದಾವಾ ಅನುಸೂಚಿ 1 ಬಿ ರ ಆಸ್ತಿಯನ್ನು ರಿ ಸ ನಂಬರ 201/6 ರ ಆಸ್ತಿಯನ್ನು ಖರೀದಿಸಿದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ದಾವಾ ಆಸ್ತಿಗಳಲ್ಲಿ 1 ಎ ದಿಂದ 1 ಡಿ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ 2 ಎ ದಿಂದ 2 ಹೆಚ್ ವರೆಗಿನ ಆಸ್ತಿಗಳು ನನ್ನ ಅಜ್ಜನಿಗೆ ಸಂಬಂಧಿಸಿದ ಆಸ್ತಿಗಳು ಆಗಿದ್ದು ಈ ಹಿಂದೆ ಯಾರ ಹೆಸರಿನಲ್ಲಿದ್ದವು ಎಂಬುದು ನನಗೆ ಗೊತಿತಲ್ಲ. ದಾವಾ ಅನುಸೂಚಿ 2 ಎ ದಿಂದ 2 ಹೆಚ್ ರ ಆಸ್ತಿಗಳು ಮೂಲತಃ ನಾಲಗಿ ಪವಾಡಮಠ ರವರ ಆಸ್ತಿಗಳು ಎಂದರೆ ಸರಿ. ಆ ಆಸ್ತಿಯ ಮೂಲ ಸರ್ವೆ ನಂಬರ 60 ಆಗಿದ್ದು ಅದರ ವಿಸ್ತೀರ್ಣ ಎಕರೆ ಆಗಿತ್ತು ಎಂದರ ಸರಿ. ಈ ಆಸ್ತಿಯನ್ನು 1 ನೇ ಪ್ರತಿವಾದಿ ಶಿವಪುತ್ರಪ್ಪ ಮತ್ತು ಅವರ ಸಹೋದರ ಪಂಚಾಕ್ಷರಪ್ಪರವರು ಖರೀದಿಸಿದರು ಎಂದರೆ ಸರಿ. ಈ ಆಸ್ತಿಗಳ ಉತ್ಪನ್ನದಿಂದ ಒಂದು ಸಿಸ್ಸಿಮೇಶ್ವರ ರೈಸ್ ಮಿಲ್ ನ್ನು ಖರೀದಿಸಿದರ ಎಂದರೆ ಸರಿಯಜಲ್ಲ. ಸಾಕ್ಷಿಯು ನಾಲಗಿ ಪವಾಡಮಠ ರವರಿಂದ ಖರೀದಿಸಿದ ಸಂದರ್ಭದಲ್ಲಿ ರೈಸ ಮಿಲ್ ಇತ್ತು ಎಂದು ಸ್ವತಃ ನುಡಿಯುತ್ತಾರೆ. ನಾಲಗಿ ಪವಾಡಮಠರವರು ಖರೀದಿಸಿದ ಸಂದರ್ಭದಲ್ಲಿ ಸರ್ವೆ ನಂಬರ 60 ರಲ್ಲಿ ಜಮೀನು ಇದ್ದು ಆ ನಂತರ ಆ ಜಮೀನು ನಿವೇಶನಗಳಾಗಿ ಪರಿವರ್ತಿಸಿ ರೈಸ ಮಿಲ್ ನಿರ್ಮಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೈಸ ಮಿಲ್ ನ್ನು ಶಿವಪುತ್ರಪ್ಪನವರ ಸಹೋದರರಾದ ಪಂಚಾಕ್ಷರಪ್ಪ, ದಯಾನಂದ ಮತ್ತು ಪ್ರೇಮಾನಂದ ರವರು ಶಿವಪುತ್ರಪ್ಪರವರಿಂದ ¾ ಭಾಗದ ಹಿಸ್ಸೆಯನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಇಲ್ಲಿಯವರೆಗೂ ಸಹ ಯಾವುದೇ ಹಿಸ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿ 6 ಮತ್ತು 7 ರವರಿಗೂ ಸಹ ಸಮಾನವಾದ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಗ್ರಾಮ ಪಂಚಾಯತಿಯ ಸದಸ್ಯರು ಇದ್ದರೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳುಗಳ ನಡುವೆ ಹಿಸ್ಸೆ ಆಗಿರುವ ಬಗ್ಗೆ ನೋಂದಾಯಿತ ಹಿಸ್ಸಾ ಪತವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಈ ಬಗ್ಗೆ ಯಾವುದೇ ನೋಂದಾಯಿತ ಹಿಸ್ಸಾ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ಇದ್ದರೂ ಸಹ ಹಾಜರು ಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡ ನಂಬರ 2285 ಯಾವ ಆಧಾರದ ಮೇಲೆ ಮಾಡಲಾಯಿತು ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆಯವರು ರಾಜಕೀಯವಾಗಿ ಪ್ರಬಲರಾದ ಕಾರಣ ತನ್ನ ರಾಜಕೀಯ ಶಕ್ತಿಯನ್ನು ಉಪಯೋಗಿಸಿ ಕಂದಾಯ ಅಧಿಕಾರಿಗಳ ಮೂಲಕ ಡ ನಂಬರ 2285 ನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ

ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಯರ ನಡುವೆ ಯಾವುದೇ ಕಾನೂನು ಬದ್ದ ಹಿಸ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳಲ್ಲಿ ಪ್ರತಿವಾದಿ 6 ಮತ್ತು 7 ರವರಿಗೆ ಹಿಸ್ಸೆ ಕೊಡಬಾರದೆಂಬ ಉದ್ದೇಶಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

: **ಮರುವಿಚಾರಣೆ** : **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ